## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿ ಕೋವಿಡ್-19 ನಿಂದ ಬಾಧಿತ ಮಕ್ಕಳಿಗೆ ನೈತಿಕ, ಭಾವನಾತ್ಮಕ ಹಾಗೂ ಸಾಮಾಜಿಕ ನೆರವನ್ನು ಒದಗಿಸಿ ಮಗುವಿನ ಸರ್ವೋತೋಮುಖ ಅಭಿವೃದ್ಧಿಗೆ ಬೆಂಬಲ ನೀಡುವ ಸಲುವಾಗಿ **"ಬಾಲ ಹಿತೈಷಿ"** (ಮಾರ್ಗದರ್ಶಕತ್ವ/ ಮೆಂಟರ್‌ಶಿಪ್) ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಮರನಿ/ ಮರ/ ಕೋವಿಡ್-19/ 04-32/ 2020-21. ದಿ:02-06-2021

05.06.2021

P.D.

*****

**<u>ಪ್ರಸ್ತಾವನೆ:</u>**

ರಾಜ್ಯದಲ್ಲಿ ಕೋವಿಡ್-19ರ ವಿಪತ್ತಿನ ಬಾಧಿತ ಮಕ್ಕಳಿಗೆ ನೆರವು ನೀಡಲು ಸಮಾಜದಲ್ಲಿ ಅನೇಕರು ಕಾಳಜಿಯನ್ನು ವ್ಯಕ್ತಪಡಿಸುತ್ತಿದ್ದು, ಮಗುವಿಗೆ ಪಾಲನೆ ಮತ್ತು ರಕ್ಷಣೆಯನ್ನು ಒದಗಿಸಲು ವಿಸ್ತೃತ ಕುಟುಂಬ/ಏಕ ಪೋಷಕರ ನೆರವಿದ್ದರೂ ಸಹ ತಂದೆ/ತಾಯಿಯರನ್ನು ಕಳೆದುಕೊಂಡ 18 ವರ್ಷದೊಳಗಿನ ಮಕ್ಕಳಿಗೆ ನೈತಿಕ, ಭಾವನಾತ್ಮಕ ಮತ್ತು ಸಾಮಾಜಿಕ ನೆರವನ್ನು ಒದಗಿಸಿ ಅವರನ್ನು ಮಾನಸಿಕ ಆಘಾತದಿಂದ ಹೊರತರಲು ಹಾಗೂ ಮಗುವಿನ ಧೀರ್ಘಕಾಲಿಕ ಸಕಾರಾತ್ಮಕ ಬೆಳವಣಿಗೆಗೆ ಮತ್ತು ಸರ್ವೋತೋಮುಖ ಅಭಿವೃದ್ಧಿಗೆ ಅನುವಾಗುವಂತೆ ಒಂದು ಯೋಜನೆಯು ಅತ್ಯವಶ್ಯಕವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಕಷ್ಟದ ಸಂದರ್ಭಗಳಲ್ಲಿ ಮಗುವಿಗೆ ಹಿತೈಷಿಗಳು ವ್ಯಕ್ತಪಡಿಸಿದ ಕಾಳಜಿಯು ಮಗು ಅನುಭವಿಸಿದ ನಷ್ಟ ಅಥವಾ ಆಘಾತವನ್ನು ನಿಭಾಯಿಸಲು ಸಹಕಾರಿಯಾಗಲು, ಮಗುವಿಗೆ ಭಾವನಾತ್ಮಕ ಬೆಂಬಲವನ್ನು ನೀಡಲು ಶೈಕ್ಷಣಿಕ ಹಾಗೂ ಇತರ ಜೀವನ ಸನ್ನಿವೇಶಗಳಲ್ಲಿ ಮಾಡಬಹುದಾದ ಕಷ್ಟಕರ ನಿರ್ಧಾರಗಳನ್ನು ನಿರ್ವಹಿಸಲು ಮಕ್ಕಳಿಗೆ ಅವಶ್ಯಕ ಬೆಂಬಲ, ಸಹಾಯ ನೀಡಲು ಮತ್ತು ಮಗುವಿನ ಸರ್ವೋತೋಮುಖ ಬೆಳವಣಿಗೆಯನ್ನು ಬೆಂಬಲಿಸಿ ಪ್ರೋತ್ಸಾಹಿಸಲು **"ಬಾಲ ಹಿತೈಷಿ"** (ಮಾರ್ಗದರ್ಶಕತ್ವ/ ಮೆಂಟರ್‌ಶಿಪ್) ಯೋಜನೆಯನ್ನು ಜಾರಿಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಹಾಗೂ ಸದರಿ ಯೋಜನೆಯು ಮಕ್ಕಳ ಬಗ್ಗೆ ಕಾಳಜಿ ಇರುವ ಒಬ್ಬ ಹಿತೈಷಿಯನ್ನು ಮಗುವಿಗೆ ಸಂಧಾನಿಸುವ ಪ್ರಕ್ರಿಯೆ ಮಾತ್ರ ಆಗಿರುವುದರಿಂದ, ಸರ್ಕಾರಕ್ಕೆ ಇದರಿಂದ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲವೆಂದು, ಅಲ್ಲದೆ ಒಂದು ವೇಳೆ ಮಾರ್ಗದರ್ಶಕ ಇಚ್ಚಿಸಿದ್ದಲ್ಲಿ ಅವರ ವೈಯಕ್ತಿಕ ಆದಾಯದಿಂದ ಅವರು ಮಗುವಿಗೆ ನೆರವನ್ನು ನೀಡುವ ಹೆಚ್ಚಿನ ಸೌಲಭ್ಯ ಸಿಗುತ್ತದೆ ಎಂದು ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು, ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಮಾನ್ಯ ಇಲಾಖಾ ಸಚಿವರ ಅನುಮೋದನೆ ಪಡೆದು ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಮಮಇ 64 ಮಭಾಬ 2021 ಬೆಂಗಳೂರು, ದಿನಾಂಕ:05 -06-2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ರಾಜ್ಯದಲ್ಲಿ ಕೋವಿಡ್-19 ನಿಂದ ಬಾಧಿತ ಮಕ್ಕಳಿಗೆ ನೈತಿಕ, ಭಾವನಾತ್ಮಕ ಹಾಗೂ ಸಾಮಾಜಿಕ ನೆರವನ್ನು ಒದಗಿಸಿ ಮಗುವಿನ ಧೀರ್ಘಕಾಲಿಕ ಸಕಾರಾತ್ಮಕ ಬೆಳವಣಿಗೆಗೆ ಹಾಗೂ ಮಗುವಿನ ಸರ್ವೋತೋಮುಖ ಅಭಿವೃದ್ಧಿಗೆ ಅನುವಾಗುವಂತೆ ಈ ಆದೇಶದೊಂದಿಗೆ ಲಗತ್ತಿಸಿರುವ **"ಬಾಲ ಹಿತೈಷಿ"** (ಮಾರ್ಗದರ್ಶಕತ್ವ/ ಮೆಂಟರ್ಶಿಪ್) ಎಂಬ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಯೋಜನೆಯಿಂದ ಸರ್ಕಾರದ ಬೊಕ್ಕಸಕ್ಕೆ ಯಾವುದೇ ಆರ್ಥಿಕ ಹೊರೆ ಉಂಟಾಗಬಾರದೆಂಬ ಷರತ್ತು ವಿಧಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

G. H. Sarojamma 05/06/2021
(ಜಿ. ಹೆಚ್. ಸರೋಜಮ್ಮ)
ಸರ್ಕಾರ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಇಲಾಖೆ (ಡಿ).

5/6

ಗೆ,

1. ಪ್ರಧಾನ ಮಹಾಲೇಖಪಾಲರು, (ಎ& ಇ) ಕರ್ನಾಟಕ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿ,ಕರ್ನಾಟಕ ಸರ್ಕಾರ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, 3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು.
7. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.

9. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

“ಬಾಲ ಹಿತೈಷಿ” ಯೋಜನೆಯ ಮಾರ್ಗಸೂಚಿಗಳು

## ಹಿನ್ನೆಲೆ

ಕೋವಿಡ್-19 ನಿಂದ ಬಾಧಿತ ಮಕ್ಕಳಿಗೆ ನೈತಿಕ, ಭಾವನಾತ್ಮಕ ಹಾಗೂ ಸಾಮಾಜಿಕ ನೆರವು ನೀಡುವ ಸಲುವಾಗಿ ಸರ್ಕಾರವು “**ಬಾಲ ಹಿತೈಷಿ**” (ಮಾರ್ಗದರ್ಶಕತ್ವ/ಮೆಂಟರ್ಶಿಪ್) ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಲು ಉದ್ದೇಶಿಸಿದೆ.

ಕಷ್ಟದ ಸಂದರ್ಭಗಳಲ್ಲಿ ಮಗುವಿಗೆ ಮಾರ್ಗದರ್ಶಿಗಳು ವ್ಯಕ್ತಪಡಿಸಿದ ಕಾಳಜಿಯು ಮಗುವು ಅನುಭವಿಸಿದ ನಷ್ಟ ಅಥವಾ ಆಘಾತವನ್ನು ನಿಭಾಯಿಸಲು ಭಾವನಾತ್ಮಕ ಬೆಂಬಲವನ್ನು ನೀಡುತ್ತದೆ. ಮಾರ್ಗದರ್ಶಕರು ಶೈಕ್ಷಣಿಕ ಹಾಗೂ ಇತರ ಜೀವನ ಸನ್ನಿವೇಶಗಳಲ್ಲಿ ಮಾಡಬೇಕಾದ ಕಷ್ಟಕರವಾದ ನಿರ್ಧಾರಗಳನ್ನು ನಿರ್ವಹಿಸಲು ಮಕ್ಕಳಿಗೆ ಅವಶ್ಯಕ ಬೆಂಬಲ ಹಾಗೂ ಸಹಾಯ ನೀಡುತ್ತಾರೆ.

ಕೋವಿಡ್-19 ವಿಪತ್ತಿನಿಂದ ಬಾಧಿತ ಮಕ್ಕಳನ್ನು ಬೆಂಬಲಿಸಲು ನಾಗರಿಕ ಸಮಾಜದಲ್ಲಿ ಅನೇಕರು ಕಾಳಜಿಯನ್ನು ವ್ಯಕ್ತಪಡಿಸುತ್ತಿದ್ದಾರೆ. ಹೆಚ್ಚಿನ ಸಂದರ್ಭಗಳಲ್ಲಿ ಮಗುವಿಗೆ ಪಾಲನೆ ಮತ್ತು ರಕ್ಷಣೆಯನ್ನು ಒದಗಿಸಲು ವಿಸ್ತೃತ ಕುಟುಂಬಗಳು ಮುಂದೆ ಬಂದಿವೆ. ವಿಸ್ತೃತ ಕುಟುಂಬ/ಏಕಪೋಷಕರ ನೆರವಿದ್ದರೂ ಸಹಾ ತಂದೆ/ತಾಯಿಗಳನ್ನು ಕಳೆದುಕೊಂಡ ಮಗುವನ್ನು ಮಾನಸಿಕ ಆಘಾತದಿಂದ ಹೊರತರಲು ಹಾಗೂ ಮಗುವಿನ ದೀರ್ಘಕಾಲಿಕ ಸಕಾರಾತ್ಮಕ ಬೆಳವಣಿಗೆಗೆ ಮತ್ತು ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಅನುವಾಗುವಂತೆ “**ಬಾಲ ಹಿತೈಷಿ**” ಯೋಜನೆಯು ಅತ್ಯವಶ್ಯಕವಾಗಿದೆ.

## ಉದ್ದೇಶಗಳು

- ಇಬ್ಬರು ಪೋಷಕರು ಅಥವಾ ಪೋಷಕರಲ್ಲಿ ಒಬ್ಬರನ್ನು ಕಳೆದುಕೊಂಡು ಆಘಾತಕ್ಕೆ ಒಳಗಾಗಿರುವ ಮತ್ತು ವಿಸ್ತೃತ ಕುಟುಂಬ/ಏಕಪೋಷಕರಲ್ಲಿರುವ ಮಗುವಿಗೆ ನೈತಿಕ, ಭಾವನಾತ್ಮಕ ಮತ್ತು ಇತರ ಅಗತ್ಯವಾದ ಬೆಂಬಲ ಮತ್ತು ಕಾಳಜಿಯನ್ನು ಒದಗಿಸುವ ಸಲುವಾಗಿ.
- ಕೋವಿಡ್ -19 ರಿಂದ ಬಾಧಿತರಾದ ಮಕ್ಕಳಿಗೆ ಹಾಗೂ ಮಗುವಿನ ಬಗ್ಗೆ ಕಾಳಜಿ ಇರುವ ಒಬ್ಬ ಹಿತೈಷಿಗೆ ಪರಸ್ಪರ ಬಾಂಧವ್ಯವನ್ನು ಬೆಳೆಸುವ ಸಲುವಾಗಿ ಮತ್ತು ಹಿತೈಷಿಯಿಂದ ಮಗುವಿಗೆ ಮಾರ್ಗದರ್ಶನ ಒದಗಿಸುವ ಸಲುವಾಗಿ
- ಈ ಮಕ್ಕಳ ಜೀವನದಲ್ಲಿ 18 ವರ್ಷ ಮತ್ತು ನಂತರದ ಅವಧಿಯಲ್ಲಿಯೂ ದೀರ್ಘಕಾಲೀನ ಸಕಾರಾತ್ಮಕ ಪರಿಣಾಮವನ್ನು ಉಂಟು ಮಾಡಲು, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ತಮ್ಮ ಅತ್ಯುನ್ನತ ಸಾಮರ್ಥ್ಯವನ್ನು ಸಾಧಿಸಲು ಅವರಿಗೆ ಸಹಾಯ ಮಾಡುವ ಸಲುವಾಗಿ.
- ಸಮುದಾಯದ ಆಸಕ್ತಿಯನ್ನು ಸಜ್ಜುಗೊಳಿಸಲು ಮತ್ತು ಕೋವಿಡ್ -19 ನಿಂದ ಬಾಧಿತ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಸಾರ್ವಜನಿಕರನ್ನು

ಸಂವೇದನಾಶೀಲಗೊಳಿಸುವುದು ಮತ್ತು ಮಕ್ಕಳ ಹಿತಾಸಕ್ತಿಗಳಿಗಾಗಿ ಅವರು ಯತ್ನಿಸುವಂತೆ ಮಾಡುವ ಸಲುವಾಗಿ

**ಯೋಜನೆಯ ಫಲಾನುಭವಿಗಳು**

18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಕೋವಿಡ್ ನಿಂದ ಬಾಧಿತರಾದ ಮಕ್ಕಳು

**ಮಾರ್ಗದರ್ಶಕತ್ವ**

ಮಗುವಿನ ಸರ್ವತೋಮುಖ ಬೆಳವಣಿಗೆಯನ್ನು ಬೆಂಬಲಿಸಿ ಪ್ರೋತ್ಸಾಹಿಸುವುದು ಪರಿಣಾಮಕಾರಿ ಮಾರ್ಗದರ್ಶಕತ್ವವಾಗುತ್ತದೆ.

**ಮಾರ್ಗದರ್ಶಕರು ಕೆಳಕಂಡಂತೆ ಕಾರ್ಯನಿರ್ವಹಿಸುವುದು**:-

- ಮಗುವು ಹೇಳುವ ಎಲ್ಲಾ ವಿಷಯಗಳನ್ನು ಸಹನೆಯಿಂದ ಆಲಿಸಿಕೊಳ್ಳುವುದು.
- ಯಾವುದೇ ಕಾರಣಕ್ಕೂ ಮಗುವಿಗೆ ಮಾರ್ಗದರ್ಶಕರು ಅವರನ್ನು ಉದ್ಧರಿಸಲು ಬಂದ ವ್ಯಕ್ತಿ ಎಂಬ ಭಾವನೆ ಬಾರದಂತೆ ಎಚ್ಚರವಹಿಸುವುದು.
- ಮಗುವಿಗೆ ಒಬ್ಬ ಗೆಳೆಯರಂತೆ ವ್ಯವಹರಿಸಿ ಮಗುವಿನ ಭಾವನಾತ್ಮಕ ಅವಶ್ಯಕತೆಗಳನ್ನು ಪೂರೈಸುವುದು.
- ಮಗುವನ್ನು ಗೌರವಿಸಿ ಆತ್ಮೀಯತೆಯಿಂದ ನೋಡಿಕೊಳ್ಳುವುದು.
- ಪರಸ್ಪರ ನಂಬಿಕೆ ಮತ್ತು ಗೌರವವನ್ನು ಬೆಳೆಸಿ ಕೊಳ್ಳುವುದು
- ಗೌಪ್ಯತೆಯನ್ನು ಕಾಪಾಡಿಕೊಳ್ಳುವುದು
- ನಿರ್ದೇಶನಗಳನ್ನು ನೀಡುವ ಬದಲು, ಮಗುವಿನ ಸಮಸ್ಯೆಗಳನ್ನು ಪರಿಹರಿಸಲು ಮಗುವಿಗೆ ಬೆಂಬಲ ನೀಡುವುದು
- ಮಗುವಿನ ಅಭಿವೃದ್ಧಿ ಮತ್ತು ಪ್ರಗತಿಯತ್ತ ಗಮನ ಹರಿಸುವುದು
- ವಿಸ್ತೃತ ಕುಟುಂಬ/ಏಕಪೋಷಕರು ಒದಗಿಸುವ ಬೆಂಬಲವನ್ನು ಗೌರವಿಸಿ ಮಗುವಿನ ಹಿತದೃಷ್ಟಿಯಿಂದ ವಿಸ್ತೃತ ಕುಟುಂಬ/ಏಕಪೋಷಕರ ಕುಟುಂಬದೊಂದಿಗೆ ಸಮನ್ವಯದೊಂದಿಗೆ ಕೆಲಸ ಮಾಡುವುದು.

**ಯೋಜನೆಯ ಅನುಷ್ಠಾನ:**

- ಪ್ರತಿ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕ (ಡಿಸಿಪಿಯು)ವು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ನೋಡಲ್ ಪ್ರಾಧಿಕಾರ ವಾಗಿರುತ್ತದೆ.

**ಹಂತ 1: ಮಾರ್ಗದರ್ಶಕರಾಗಲು ನೋಂದಾಯಿಸುವುದು**

ಮಗುವಿಗೆ ಮಾರ್ಗದರ್ಶನ ನೀಡಲು ಉತ್ಸುಕರಾಗಿರುವ ಯಾವುದೇ ವ್ಯಕ್ತಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಲ್ಲಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ಮಾರ್ಗದರ್ಶಕರಾಗಿ ನೋಂದಾಯಿಸಿಕೊಳ್ಳಲು ಅರ್ಜಿ ನಮೂನೆಯು (ಅನುಬಂಧ 1). ನಿರ್ದೇಶನಾಲಯದ ವೆಬ್ಸೈಟ್: **https://icps.karnataka.gov.in** ನಲ್ಲಿ ಡಿಜಿಟಲ್ ಫಾರ್ಮ್ ಲಭ್ಯವಿದ್ದು, ಮಾರ್ಗದರ್ಶಕರಾಗಿ ನೋಂದಾಯಿಸಬಯಸುವವರು ಈ ಲಿಂಕ್ ಮೂಲಕ ನೋಂದಾಯಿಸಿಕೊಳ್ಳುವುದು.

**ಹಂತ 2: ಅರ್ಜಿಗಳ ಪರಿಶೀಲನೆ**

ನಿರೀಕ್ಷಿತ ಮಾರ್ಗದರ್ಶಕರಿಂದ ಅರ್ಜಿಗಳು ಸ್ವೀಕರಿಸಿದ ನಂತರ, ಪೂರ್ವನಿರ್ಧರಿತ ಮಾನದಂಡಗಳ ಮೇಲೆ ಸದರಿ ಅರ್ಜಿಗಳನ್ನು ಪರಿಶೀಲಿಸಲು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಪರಿಶೀಲನೆಯಲ್ಲಿ ಸಂದರ್ಶನ, ಮನೆ ಭೇಟಿ, ಪೊಲೀಸ್ ಪರಿಶೀಲನೆ, ಉದ್ಯೋಗದಾತರು ಮತ್ತು ಇಬ್ಬರು ಸ್ಥಳೀಯ ವ್ಯಕ್ತಿಗಳನ್ನು ಸಂಪರ್ಕಸಿ ಅವರಿಂದ ಫೀಡ್ ಬ್ಯಾಕ್ ಪಡೆಯಬೇಕಾಗಿರುತ್ತದೆ. ಮಾರ್ಗದರ್ಶಕರು ಮಗುವಿಗೆ ಸುರಕ್ಷಿತವಾದ ವ್ಯಕ್ತಿಯಾಗಿರುತ್ತಾರೆ ಎಂದು ಮತ್ತು ಮಗುವಿನೊಂದಿಗೆ ಸಕಾರಾತ್ಮಕ ಸಂಬಂಧವನ್ನು ಹೊಂದುವ ಬಗ್ಗೆ  ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಖಚಿತಪಡಿಸಿಕೊಳ್ಳುವುದು.

**ಹಂತ 3: ತರಬೇತಿ**

ಅರ್ಹ ಅರ್ಜಿದಾರರಿಗೆ ಜಿಲ್ಲಾ ಅಥವಾ ರಾಜ್ಯ ಮಟ್ಟದಲ್ಲಿ ಕೋವಿಡ್-19ರ ಮುನ್ನೆಚ್ಚರಿಕಾ ಕ್ರಮಗಳು, ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಅರ್ಹತೆಗಳು, ಮಕ್ಕಳ ಸ್ನೇಹಿ ನಡವಳಿಕೆ ಮತ್ತು ಮಕ್ಕಳ ಉತ್ತಮ ಹಿತಾಸಕ್ತಿಗಳನ್ನು ಕಾಪಾಡಲು ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರ ಮೂಲಭೂತ ತತ್ವಗಳ ಆಧಾರಿತ ತರಬೇತಿಗೊಳಿಸುವುದು.

ತರಬೇತಿ ನಂತರ ಅರ್ಜಿದಾರರಿಗೆ ಈ ಕಾರ್ಯಕ್ರಮದಿಂದ ಹಿಂದೆ ಸರಿಯುವ ಅವಕಾಶವಿದ್ದು, ಅರ್ಜಿದಾರರು ತರಬೇತಿ ಪೂರ್ಣಗೊಳಿಸಿದ 3 ದಿನಗಳ ಒಳಗೆ ಇಮೇಲ್ ಮೂಲಕ ಮಾರ್ಗದರ್ಶಕರಾಗಿ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವ ಹಾಗೂ ಮಕ್ಕಳೊಂದಿಗೆ ಇರುವಾಗ ಮಾನಸಿಕವಾಗಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಬಗ್ಗೆ ತಮ್ಮ ನಿಬದ್ಧತೆಯನ್ನು ಲಿಖಿತವಾಗಿ ನಿಗದಿತ ನಮೂನೆಯಲ್ಲಿ(ಅನುಬಂಧ-2) ದೃಢೀಕರಿಸಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ ಸಲ್ಲಿಸುವುದು.

**ಹಂತ 4: ಮಾರ್ಗದರ್ಶಕರ ಆಯ್ಕೆ**

ಮೇಲಿನಂತೆ ಸ್ವೀಕರಿಸಲಾದ ಅರ್ಹ ಅರ್ಜಿಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಮಕ್ಕಳ ಕಲ್ಯಾಣ ಸಮಿತಿಗೆ ಅನುಮೋದನೆಗೆ ಸಲ್ಲಿಸುವುದು.  ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಂದ ಸಲ್ಲಿಸಲಾದ ಅರ್ಜಿಗಳನ್ನು ಪರಿಶೀಲಿಸಿ ಮಕ್ಕಳ ಕಲ್ಯಾಣ ಸಮಿತಿಗಳು ಅಂತಿಮವಾಗಿ ಆಯ್ಕೆಯಾದ ಮಾರ್ಗದರ್ಶಕರ ಪಟ್ಟಿಯ ಕುರಿತು ನಿಗದಿತ ನಮೂನೆಯಲ್ಲಿ (ಅನುಬಂಧ-3) ಆಯ್ಕೆಯ ಆದೇಶವನ್ನು ಹೊರಡಿಸುವುದು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಪ್ರತಿ ಅರ್ಜಿದಾರರ ಪರಿಶೀಲನಾ ಪ್ರಕ್ರಿಯೆಯ ದಾಖಲಾತಿಗಳನ್ನು ಹಾಗೂ ಮೇಲಿನಂತೆ ಮಕ್ಕಳ ಕಲ್ಯಾಣ ಸಮಿತಿಯು ಆಯ್ಕೆ ಮಾಡಿದ ಎಲ್ಲಾ ಮಾರ್ಗದರ್ಶಕರ ವೈಯಕ್ತಿಕ ಕಡತಗಳನ್ನು ನಿರ್ವಹಿಸುವುದು ಮತ್ತು ಗೌಪ್ಯತಾ ಕಡತಗಳಲ್ಲಿ ಸಂರಕ್ಷಿಸುವುದು.

## ಹಂತ 5: ಮಾರ್ಗದರ್ಶಿ ಮತ್ತು ಮಗುವಿನ ಹೊಂದಾಣಿಕೆ

**ಹೊಂದಾಣಿಕೆ ಮಾಡಲು ಪರಿಗಣಿಸಬೇಕಾದ ಮಾನದಂಡಗಳು**:

- **ಮಾರ್ಗದರ್ಶಕರಿಗೆ ಧೂಮಪಾನ, ಕುಡಿತ, ಮಾದಕ ದ್ರವ್ಯ ಇತ್ಯಾದಿ... ಯಾವುದೇ ದುಶ್ಚಟಗಳು ಇರಬಾರದು**.
- ಸ್ಥಳ / ಭೌಗೋಳಿಕ ಸಾಮೀಪ್ಯ,
- ಭಾಷೆ,
- ಆಸಕ್ತಿಗಳು,
- ಹಿನ್ನೆಲೆ, ಜನಾಂಗೀಯತೆ
- ಲಿಂಗ,
- ಅರ್ಹತೆಗಳು,
- ಆಚಾರ, ವಿಚಾರಗಳು
- ಎಲ್ಲಾ ಹೆಣ್ಣು ಮಕ್ಕಳನ್ನು ಮಹಿಳಾ ಮಾರ್ಗದರ್ಶಕರಿಗೆ ಹೊಂದಿಸುವುದು. ಭಿನ್ನ ಲಿಂಗದ (ಹೆಣ್ಣು ಮತ್ತು ಗಂಡು) ಒಡಹುಟ್ಟಿದವರಿದ್ದಲ್ಲಿ ಮಹಿಳಾ ಮಾರ್ಗದರ್ಶಕರಿಗೆ ಹೊಂದಿಸುವುದು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಮಗುವಿನೊಂದಿಗೆ ಮಾರ್ಗದರ್ಶಕರನ್ನು ಹೊಂದಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ.

ಈ ಸಂಬಂಧ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಮಗು ಮತ್ತು ವಿಸ್ತೃತ ಕುಟುಂಬ/ಏಕಪೋಷಕದ ಅಭಿಪ್ರಾಯಗಳನ್ನು ಪಡೆದು, ಸಂಭಾವ್ಯ ಮಾರ್ಗದರ್ಶಕ, ಮಗು ಮತ್ತು ವಿಸ್ತೃತ ಕುಟುಂಬ/ಏಕಪೋಷಕದ ನಡುವೆ ಸಭೆ ಆಯೋಜಿಸಿ, ಮಗು ಮತ್ತು ವಿಸ್ತೃತ ಕುಟುಂಬ/ಏಕಪೋಷಕಗಳ ಒಪ್ಪಿಗೆ ಪಡೆದ ನಂತರ ಮಗುವಿಗೆ ಮಾರ್ಗದರ್ಶಕರನ್ನು ಅನುಸಂಧಾನ ಮಾಡುವ ಪ್ರಕ್ರಿಯೆ ಪೂರ್ಣಗೊಳಿಸಲು ಮಕ್ಕಳ ಕಲ್ಯಾಣ ಸಮಿತಿಗೆ ಶಿಫಾರಸ್ಸು ಮಾಡುವುದು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವರದಿಯ ಆಧಾರದ ಮೇಲೆ ಮಗು ಮತ್ತು ಮಾರ್ಗದರ್ಶಕರನ್ನು ಅನುಸಂಧಾನಿಸಲು ಅನುಸಂಧಾನ ಆದೇಶವನ್ನು ಮಕ್ಕಳ ಕಲ್ಯಾಣ ಸಮಿತಿಯು ನಿಗದಿತ ನಮೂನೆಯಲ್ಲಿ (ಅನುಬಂಧ-4) ಹೊರಡಿಸತಕ್ಕದ್ದು ಹಾಗೂ ಪ್ರತಿಯನ್ನು ವಿಸ್ತೃತ ಕುಟುಂಬ/ಏಕಪೋಷಕಕ್ಕೆ ಒದಗಿಸತಕ್ಕದ್ದು.

ಮಗುವಿಗೆ ಸಂಧಾನಿಸಲಾದ ಮಾರ್ಗದರ್ಶಕರು ಮಗುವಿನ ಆರೈಕೆ ಸಲುವಾಗಿ ಆರ್ಥಿಕ ನೆರವನ್ನು ಒದಗಿಸಲು ಸಹ ಇಚ್ಛಿಸಿದ್ದಲ್ಲಿ ಕನಿಷ್ಟ ಒಂದು ವರ್ಷಕ್ಕೆ ಈ ಸೌಲಭ್ಯ ಒದಗಿಸಲು ನಿಬದ್ಧರಾಗಿರಬೇಕು. ಮಕ್ಕಳ ಕಲ್ಯಾಣ ಸಮಿತಿಯು ಈ ಕುರಿತು ಅನುಸಂಧಾನ ಆದೇಶದಲ್ಲಿ ಮಾಹೆಯಾನ ಪಾವತಿಸಲು ಇಚ್ಛಿಸುವ ಮೊತ್ತದ ವಿವರ ಹಾಗೂ ಸದರಿ ಮೊತ್ತವು ಮಗು ಹಾಗೂ ಮಗುವಿನ ಆರೈಕೆದಾರರ ಜಂಟಿ ಖಾತೆಗೆ ಜಮೆ ಆಗುವ ಬಗ್ಗೆ ಇತ್ಯಾದಿ ಮಾಹಿತಿಗಳನ್ನು ಅನುಸಂಧಾನದ ಆದೇಶದಲ್ಲಿ ಸೇರಿಸತಕ್ಕದ್ದು.

**ಹಂತ 6: ಮಾರ್ಗದರ್ಶನ ಚಟುವಟಿಕೆಗಳು**

**ಮಾರ್ಗದರ್ಶಿ-ಮಗುವಿನ ಸಂವಾದ** : ಈ ಸಂವಾದವನ್ನು ಉತ್ತಮವಾಗಿ ಮುಖಾಮುಖಿ ಮಾಡುವುದು, ಆದರೆ ಪ್ರಸ್ತುತ ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಸಂವಾದವನ್ನು ಆನ್ಲೈನ್ / ವರ್ಚುವಲ್ ಮೂಲಕ ಮಾಡುವುದು. ಈ ಸಂವಾದಗಳಲ್ಲಿ ಮಾರ್ಗದರ್ಶಕರು ತರಗತಿಯನ್ನು ಬೋಧಿಸುವ ರೀತಿಯಾಗದಂತೆ, ಮಗುವು ತನ್ನ ಮನಸ್ಸಿನಿಂದ ಮುಕ್ತವಾಗಿ ಹಂಚಿಕೊಳ್ಳಲು ಇಷ್ಟಪಡುವ ಎಲ್ಲಾ ಮಾತುಗಳನ್ನು ಕೇಳಲು ಪ್ರಾಧಾನ್ಯತೆ ನೀಡಬೇಕು.

**ಮಾರ್ಗದರ್ಶಿ- ಮಕ್ಕಳ ಸಂವಾದಗಳು**: ಮಾರ್ಗದರ್ಶಕರು ತಿಂಗಳಿಗೆ ಕನಿಷ್ಠ 6-8 ಗಂಟೆಗಳ ಕಾಲ ಮಕ್ಕಳೊಂದಿಗೆ ಕಳೆಯುವುದು. ಮಗುವಿನ ಅಗತ್ಯತೆ ಮತ್ತು ಆದ್ಯತೆಗಳು, ಮಗುವಿನ ವಯಸ್ಸು ಮತ್ತು ಅವರ ಸ್ವಂತ ಕೌಶಲ್ಯಗಳ ಹಿನ್ನೆಲೆಯಲ್ಲಿ ಮಗುವಿಗೆ ಕ್ರೀಡೆ, ಪುಸ್ತಕಗಳನ್ನು ಓದುವುದು, ಹೋಂ ವರ್ಕ ಮಾಡಲು ಮತ್ತು ಪರೀಕ್ಷೆಯ ತಯಾರಿಕೆಗೆ ಸಹಾಯ ಮಾಡುವುದು.

**ವಿಸ್ತೃತ ಕುಟುಂಬ/ಏಕಪೋಷಕದ ಒಪ್ಪಿಗೆಯೊಂದಿಗೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ ಮಾಹಿತಿ ನೀಡಿ ಮಾರ್ಗದರ್ಶಿಯು ಈ ಕೆಳಗಿನವುಗಳನ್ನು ಕೈಗೊಳ್ಳಬಹುದು:**

- ಮಗುವನ್ನು ಪ್ರವಾಸಗಳಿಗೆ ಮತ್ತು ಸಾರ್ವಜನಿಕರು ಪ್ರವೇಶಿಸಬಹುದಾದ ಸ್ಥಳಗಳು ಮತ್ತು ಕಾರ್ಯಕ್ರಮಗಳಿಗೆ ಕರೆದೊಯ್ಯಬಹುದು ಅದು ಗ್ರಂಥಾಲಯ, ವಸ್ತು ಸಂಗ್ರಹಾಲಯ, ರಾಷ್ಟ್ರೀಯ ಉದ್ಯಾನವನ, ಸಾಂಸ್ಕೃತಿಕ ಅಥವಾ ಕ್ರೀಡಾ ಕಾರ್ಯಕ್ರಮ, ವೃತ್ತಿ ಮೇಳ ಅಥವಾ ಪ್ರದರ್ಶನ ಇತ್ಯಾದಿ.
- ಮಗುವಿನ ಶಾಲೆಗೆ ಭೇಟಿ ನೀಡಿ ಮತ್ತು ಶಿಕ್ಷಕರನ್ನು ಭೇಟಿ ಮಾಡಿ ಮಗುವಿನ ಕಾರ್ಯಕ್ಷಮತೆಯನ್ನು ಚರ್ಚಿಸುವುದು.
- ಮಗುವಿಗೆ ಹೆಚ್ಚಿನ ಸಹಾಯ ಅಗತ್ಯವಿರುವ ಕ್ಷೇತ್ರಗಳನ್ನು ಗುರುತಿಸಿ ಉದಾ. ಬೋಧನಾ ತರಗತಿಗಳು, ಸಮಾಲೋಚನೆ ಇತ್ಯಾದಿ... ಮಗುವನ್ನು ಈ ತರಗತಿಗಳಲ್ಲಿ ಉಪಸ್ಥಿತರಿರುವಂತೆ ನೋಡಿಕೊಳ್ಳುವುದು.

- ಮಗುವಿಗೆ ವಿವಿಧ ವಾತಾವರಣದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಮಾರ್ಗದರ್ಶಕರ ಕೆಲಸದ ಸ್ಥಳ, ಕಾಲೇಜು, ಸಂಸ್ಥೆ, ಮಾರ್ಗದರ್ಶಕರ ಸ್ನೇಹಿತರ ಕೆಲಸದ ಸ್ಥಳಗಳಿಗೆ ಮಗುವನ್ನು ಕರೆದೊಯ್ಯುವುದು.
- ಈ ರೀತಿ ಕೈಗೊಂಡ ಪ್ರತಿ ಪ್ರವಾಸದ ನಂತರ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಆಪ್ತ ಸಮಾಲೋಚಕರು ಮಗುವಿನಿಂದ ಪ್ರತಿಕ್ರಿಯೆ (feedback**)** ಪಡೆಯುವುದು ಹಾಗೂ ಮಗುವು ಸಕಾರಾತ್ಮಕ ಮಾರ್ಗದಲ್ಲಿಯೇ ಇರುವುದರ ಬಗ್ಗೆ ಖಚಿತಪಡಿಸಿಕೊಳ್ಳುವುದು.

ಈ ಆದೇಶದೊಂದಿಗೆ ಮಾರ್ಗದರ್ಶಕರು ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬ ಪಟ್ಟಿಯನ್ನು ಒದಗಿಸಲಾಗಿದೆ (ಅನುಬಂಧ-5). ಮಾರ್ಗದರ್ಶಕರು ಸದರಿ ಅಂಶಗಳನ್ನು ಸದಾ ಗಮನದಲ್ಲಿ ಇಟ್ಟುಕೊಳ್ಳತಕ್ಕದ್ದು.

**<u>ಗುಂಪು ಸಂವಾದಗಳು</u>** - ಪ್ರತಿ 6 ತಿಂಗಳಿಗೊಮ್ಮೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಮಾರ್ಗದರ್ಶಕರು ಮತ್ತು ಅವರಿಗೆ ಸಂಧಾನಿಸಲಾದ ಮಕ್ಕಳಿಗಾಗಿ ಗುಂಪು ಸಂವಾದಗಳು ಅಥವಾ ಕಾರ್ಯಾಗಾರಗಳನ್ನು ಆಯೋಜಿಸುವುದು. ಮಾರ್ಗದರ್ಶಕರು ಇತರ ಮಾರ್ಗದರ್ಶಕರನ್ನು ಭೇಟಿ ಮಾಡಲು ಹಾಗೂ ಮಾರ್ಗದರ್ಶಕತ್ವದಲ್ಲಿರುವ ಮಕ್ಕಳು ಸಹಾ ಪರಸ್ಪರ ಸಂವಹನ ನಡೆಸಲು ಅವಕಾಶವನ್ನು ಒದಗಿಸಿ, ಅನುಭವಗಳನ್ನು ಹಂಚಿಕೊಳ್ಳಲು, ಅವರ ಸಂಬಂಧವನ್ನು ಬಲಪಡಿಸಲು ಮತ್ತು ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು ವೇದಿಕೆಯನ್ನು ಒದಗಿಸುವುದು.

## ಮೇಲ್ವಿಚಾರಣೆ

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಾಮಾಜಿಕ ಕಾರ್ಯಕರ್ತರು ಮಾರ್ಗದರ್ಶಕ ಮತ್ತು ಮಗುವಿಗೆ ಅವರು ಎದುರಿಸುವ ಯಾವುದೇ ತೊಂದರೆಗಳನ್ನು ನಿವಾರಿಸಲು ಸಹಾಯ ಮಾಡುವುದು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಾಮಾಜಿಕ ಕಾರ್ಯಕರ್ತರು ತಿಂಗಳಿಗೊಮ್ಮೆ ಮಾರ್ಗದರ್ಶಕ, ಮಾರ್ಗದರ್ಶಕತ್ವದಲ್ಲಿರುವ ಮಗು ಮತ್ತು ಪೋಷಕರನ್ನು ಸಂಪರ್ಕಿಸಬೇಕು. ಮಾರ್ಗದರ್ಶಕ ಚಟುವಟಿಕೆಗಳಲ್ಲಿ ಭಾಗವಹಿಸಲು ಕಳೆದ ಕಾಲಾವಧಿಯ ವಿವರ ಮತ್ತು ಆ ಚಟುವಟಿಕೆಗಳ ವಿವರಣೆಯನ್ನು ಒಳಗೊಂಡಂತೆ ಸಾಮಾಜಿಕ ಕಾರ್ಯಕರ್ತ ಆ ತಿಂಗಳ ಎಲ್ಲಾ ಮಾಹಿತಿಯನ್ನು ಸಂಗ್ರಹಿಸಿ ಈ ಕುರಿತು ಮಕ್ಕಳ ಕಲ್ಯಾಣ ಸಮಿತಿಗೆ ವರದಿ ಸಲ್ಲಿಸುವುದು.

ಮಾರ್ಗದರ್ಶಿ ಮತ್ತು ಮಗುವಿನ ಬಾಂಧವ್ಯದಲ್ಲಿ ಯಾವುದೇ ತೊಂದರೆಗಳು, ಸಂಘರ್ಷಣೆಗಳು ಅಥವಾ ಕಳವಳಗಳ ಸಂದರ್ಭದಲ್ಲಿ, ಸಾಮಾಜಿಕ ಕಾರ್ಯಕರ್ತ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ/ ಮಕ್ಕಳ ಕಲ್ಯಾಣ ಸಮಿತಿಗಳ ಮಾರ್ಗದರ್ಶನದಲ್ಲಿ ಸಮಸ್ಯೆಗಳನ್ನು ಸರಿಪಡಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು.

ಮಗುವಿಗೆ ವೈದ್ಯಕೀಯ ಇತ್ಯಾದಿ ವಿಶೇಷ ಸೇವೆಗಳ ಅಗತ್ಯವಿದ್ದಲ್ಲಿ, ಮಾರ್ಗದರ್ಶಕರು ಸದರಿ ಅವಶ್ಯಕತೆಗಳನ್ನು ಗುರುತಿಸುವುದು.

**ಅನುಸರಣೆ**

ಸಾಮಾಜಿಕ ಕಾರ್ಯಕರ್ತ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಪ್ರತಿಯೊಂದು ಮಾರ್ಗದರ್ಶಕರ ಕುರಿತು ಮಾಸಿಕ ವರದಿಯನ್ನು ಸಲ್ಲಿಸಬೇಕು ಮತ್ತು ಘಟಕವು ಅಂತಹ ಕ್ರೋಢೀಕೃತ ವರದಿಗಳನ್ನು ಮಕ್ಕಳ ಕಲ್ಯಾಣ ಸಮಿತಿಗೆ ಸಲ್ಲಿಸುವುದು. ಈ ರೀತಿ ವರದಿಗಳನ್ನು ಪ್ರಥಮ ವರ್ಷದಲ್ಲಿ ಮಾಸಿಕವಾಗಿ, ನಂತರದ ವರ್ಷಗಳಲ್ಲಿ ತ್ರೈಮಾಸಿಕವಾಗಿ ಸಲ್ಲಿಸುವುದು.

**ಮಾರ್ಗದರ್ಶಕತ್ವದ ಅವಧಿ**

ಪ್ರತಿ ಮಾರ್ಗದರ್ಶಕತ್ವದ ಸಂಬಂಧವನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ವಾರ್ಷಿಕವಾಗಿ ಪರಿಶೀಲಿಸುತ್ತದೆ. ಘಟಕವು ತನ್ನ ವರದಿಯನ್ನು ಮಕ್ಕಳ ಕಲ್ಯಾಣ ಸಮಿತಿಗೆ ಸಲ್ಲಿಸುತ್ತದೆ. ಮಗು, ಮಾರ್ಗದರ್ಶಿ ಮತ್ತು ವಿಸ್ತೃತ ಕುಟುಂಬ/ಏಕಪೋಷಕರು ಸದರಿ ಸಂಬಂಧದಿಂದ ಸಕಾರಾತ್ಮಕ ಬೆಳವಣಿಗೆಯನ್ನು ಪಡೆಯುತ್ತಿದ್ದಲ್ಲಿ, ಮಕ್ಕಳ ಕಲ್ಯಾಣ ಸಮಿತಿಯ ಅನುಮೋದನೆ ಮೇರೆಗೆ ಪ್ರತಿ ವರ್ಷ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮಕ್ಕಳ ಕಲ್ಯಾಣ ಸಮಿತಿಯಿಂದ ಮಾರ್ಗದರ್ಶಕತ್ವವನ್ನು ವಿಸ್ತರಿಸಿ, ನಿಗದಿತ ನಮೂನೆಯಲ್ಲಿ (ಅನುಬಂಧ-6) ನವೀಕರಣ ಆದೇಶವನ್ನು ಪಡೆಯುವುದು.

**ಮಾರ್ಗದರ್ಶಕತ್ವದ ಅಕಾಲಿಕ ಮುಕ್ತಾಯ**

ಮಾರ್ಗದರ್ಶಕ ಅಥವಾ ಮಗು ಅಥವಾ ವಿಸ್ತೃತ ಕುಟುಂಬ/ಏಕಪೋಷಕ ಇವರಲ್ಲಿ ಯಾವುದೇ ಅಸಮಾಧಾನ ಉಂಟಾದಲ್ಲಿ ಹಾಗೂ ಮಾರ್ಗದರ್ಶಕ ಮತ್ತು ಮಗುವಿನ ಜೀವನದಲ್ಲಿ ನಡೆದ ಕೆಲವು ಘಟನೆಗಳಿಂದ ಮಾರ್ಗದರ್ಶಕತ್ವವನ್ನು ಮುಂದುವರೆಸುವುದು ಕಷ್ಟವಾದ ಸಂದರ್ಭಗಳಲ್ಲಿ ಮಕ್ಕಳ ಕಲ್ಯಾಣ ಸಮಿತಿಯು ಮಾರ್ಗದರ್ಶಕತ್ವವನ್ನು ಮುಕ್ತಾಯಗೊಳಿಸಿ ನಿಗದಿತ ನಮೂನೆಯಲ್ಲಿ (ಅನುಬಂಧ-7) ಮಾರ್ಗದರ್ಶಕತ್ವದ ಮುಕ್ತಾಯ ಆದೇಶ ಹೊರಡಿಸಬಹುದು.

**********